# ಅಮ್ಮನಿಗೇನೂ ಗೊತ್ತಿಲ್ಲ ಅಂತೀರಾ...

**ಮಹಿಳೆಯರ ಬಗ್ಗೆ ಗಂಡಸರು ಆಡುವ ಮಾತುಗಳು ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರಬಹುದು. ಅಷ್ಟಲ್ಲದೆ, ನುಡಿದರೆ ಮುತ್ತಿನ ಹಾರದಂತಿರಬೇಕು ಎಂದು ಬಸವಣ್ಣ ಹೇಳಿದ್ದಾರಾ?**

■ ಸ್ವಯಂಪ್ರಭಾ



ಸದಾಶಿವ ಶೆಟ್ಟಿ ಬ್ಯಾಂಕ್ ಉದ್ಯೋಗಿ. ಇಬ್ಬರು ಮಕ್ಕಳ ತಂದೆ. ಬಹಳ ಗೌರವಯುತ ಮತ್ತು ಸಮಾಧಾನ ಚಿತ್ತದ ಮನುಷ್ಯನಾದ್ದರಿಂದ ಸ್ನೇಹಿತರು–ಬಂಧುಗಳು ಅವರ ಮನೆಗೆ ಬಂದು ಸಲಹೆ ಮಾರ್ಗದರ್ಶನ ಕೇಳುತ್ತಿರುತ್ತಾರೆ. ಅವರ ಇಬ್ಬರು ಪುಟಾಣಿ ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾರೆ. ಅವರ ಮನೆಯನ್ನು ನಿಭಾಯಿಸಿಕೊಂಡು ಹೋಗುವ ಸೂತ್ರಧಾರಿಣಿ ಪತ್ನಿ ತ್ರಿನೇತ್ರ.

ಎಲ್ಲವೂ ಚೆನ್ನಾಗಿಯೇ ನಡೆದುಕೊಂಡು ಹೋಗುವ ಪ್ರಶಾಂತವಾದ ಮನೆ. ಆದರೆ ತ್ರಿನೇತ್ರಳ ಮನದ ಮೂಲೆಯಲ್ಲೊಂದು ಬೇಸರ. ಎಂಜಿನಿಯರಿಂಗ್ ಓದು ಮುಗಿಸಿದ್ದರೂ ಆಕೆ ಮದುವೆಯಾದ ಬಳಿಕ ಮನೆವಾಳ್ತೆಯೇ ಇಷ್ಟವೆಂದು, ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಿದ್ದಳು. ಆದರೆ, ಪುಸ್ತಕ–ಪತ್ರಿಕೆಗಳನ್ನು ಓದುವ ಹವ್ಯಾಸ ಬಿಟ್ಟಿರಲಿಲ್ಲ. ಲೋಕಜ್ಞಾನದ ವಿಷಯ ಚೆನ್ನಾಗಿಯೇ ತಿಳಿದುಕೊಂಡಿದ್ದಳು. ಹಾಡುಗಳನ್ನು ಹಾಡುವುದರಲ್ಲಿ ಈಗಲೂ ಚುರುಕಾಗಿದ್ದಳು. ಇಷ್ಟೆಲ್ಲ ವಿಷಯಗಳು ಚೆನ್ನಾಗಿಯೇ ಇದ್ದರೂ, ಆಕೆಯ ಬೇಸರಕ್ಕೆ ಕಾರಣವಿಷ್ಟೇ – ಮಕ್ಕಳೊಡನೆ ಹಾರ್ದಿಕವಾಗಿ ಮಾತನಾಡುವಾಗ, ಪತಿಯು ಸದಾ ಆಕೆಯನ್ನು ಲಘುವಾದ ದೃಷ್ಟಿಕೋನದಿಂದಲೇ ನೋಡುತ್ತಿದ್ದರು.

‘ನಿಮ್ಮಮ್ಮನಿಗೋ ಏನೂ ಗೊತ್ತಾಗಲ್ಲ. ಬಸ್ ಕಂಡಕ್ಟರ್, ಅಮ್ಮನ್ನ ಈ ಬಸ್ ಸ್ಟಾಂಡ್ ಬದಲಿಗೆ ಮುಂದಿನ ಬಸ್ ಸ್ಟಾಂಡ್‌ನಲ್ಲಿ ಇಳಿಸಿದರೆ ಕಕ್ಕಾಬಿಕ್ಕಿಯಾಗುತ್ತಾಳೆ’ ಎಂದು ನಕ್ಕುಬಿಡುತ್ತಿದ್ದರು. ‘ನಿಮ್ಮಮ್ಮಂಗೆ ಓಟ್ ಹಾಕಲಿಕ್ಕೆ ವಯಸ್ಸಿನ ಅರ್ಹತೆ ಇದೆ. ಆದರೆ ಯಾರಿಗೆ ಓಟ್ ಹಾಕಬೇಕು ಅಂತ ನಾನು ಒಂದು ಪಾಠ ಮಾಡಿದ್ರೆ ಮಾತ್ರ ಸರಿಯಾಗಿ ಆಯ್ಕೆ ಮಾಡುವುದು’ ಎಂದಾಗ, ಈ ಹೆಂಗಸರಿಗೆ ರಾಜಕೀಯ ಎಲ್ಲಿ ಅರ್ಥವಾಗುತ್ತದೆ ಎನ್ನುವ ಉಡಾಫೆಯ ದನಿಯು ಗೋಚರಿಸುತ್ತದೆ.

‘ಅದೆಲ್ಲಾ ನಿಮ್ಮಮ್ಮಂಗೆ ಗೊತ್ತಾಗಲ್ಲ, ಇಲ್ಲಿ ಬಾ, ನಾನು ಹೇಳ್ತೀನಿ’ ಎಂದು ಮಗಳನ್ನು ಕರೆಯುವುದುಂಟು. ಅಪ್ಪ ಹೀಗೆ ಹೇಳುವುದು ಮಕ್ಕಳಿಗೆ ‘ರೂಢಿ’ಯೆನಿಸಿದ್ದರಿಂದ, ಈಗ ಮಗನೂ ಆಗೊಮ್ಮೆ ಈಗೊಮ್ಮೆ ಇಂತಹ ಸಾಲುಗಳನ್ನು ಹೇಳುವುದನ್ನು ಕಲಿತುಬಿಟ್ಟಿದ್ದಾನೆ. ‘ಅಯ್ಯೋ ಅಪ್ಪಾ, ಸಂಜೆ ಬೇಗ ಬನ್ನಿ, ಇದೆಲ್ಲಾ ಅಮ್ಮಂಗೆ ಗೊತ್ತಾಗಲ್ಲ’ ಎಂಬ ಸಾಲು ಆಕೆಯನ್ನು ಬಹಳವೇ ನೋಯಿಸಿತ್ತು. ಹಾಗಂತ ಮೇಲ್ನೋಟಕ್ಕೆ ಏನೂ ಸಮಸ್ಯೆ ಇರಲಿಲ್ಲ.

ಮದುವೆ ವಾರ್ಷಿಕೋತ್ಸವ ದಿನದ ಕುರಿತು ಮಾತನಾಡುವಾಗ, ‘ಇದು ನನ್ನ ಸ್ವಾತಂತ್ರ್ಯವು ಕೊನೆಯಾದ ದಿನ’ವೆಂದು ನಗೆಯಾಡುವುದು, ಪತ್ನಿಯನ್ನು ‘ನಮ್ಮ ಮನೆಯ ನಿರಂಕುಶಾಧಿಕಾರಿ’ ಎಂದು ಸಂಬೋಧಿಸುವುದನ್ನು ಕಂಡಾಗ ತ್ರಿನೇತ್ರಳಿಗೆ ಬೇಸರವಾಗುತ್ತದೆ. ಅದೆಲ್ಲವೂ ದೈನಂದಿನ ಸಂಭಾಷಣೆಯ ಭಾಗವಾಗಿ ಹೋಗಿದ್ದರಿಂದ, ಈಗ ಹೊಸದೆಂದು ಅನಿಸುವುದಿಲ್ಲ. ಆದರೆ ಆಗೀಗ ಬೇಸರದ ಎಳೆಯೊಂದು ಹಾದು ಹೋಗುವುದುಂಟು.

ಆಕೆ ಕಾಲೇಜು ಶಿಕ್ಷಣವನ್ನು ಪಡೆಯಲು ಕಷ್ಟಪಟ್ಟಿದ್ದಳು. ಎಂಜಿನಿಯರಿಂಗ್ ಓದುವುದಕ್ಕೆಂದೇ ಪೂನಾಕ್ಕೆ ತೆರಳಿ ಅಲ್ಲಿ ಹಾಸ್ಟೆಲ್‌ನಲ್ಲಿ ವಾಸವಾಗಿದ್ದಳು. ಅಲ್ಲಿಂದ ಎಷ್ಟೋ ಬಾರಿ, ಒಬ್ಬಳೇ ತನ್ನೂರಿಗೆ ಪ್ರಯಾಣಿಸಿದ್ದಳು. ಬೆಂಗಳೂರಿನಲ್ಲಿ ವೃತ್ತಿ ನಿರ್ವಹಿಸುತ್ತಿದ್ದಾಗ, ಮೀಟಿಂಗುಗಳಿಗೆ ಅದೆಷ್ಟು ಬಾರಿ ಹೈದರಾಬಾದ್ ಗೆ ಹೋಗಿದ್ದಿಲ್ಲ! ಅಷ್ಟೇ ಏಕೆ, ಈಗಲೂ ಒಬ್ಬಳೇ ಅತ್ತೆ ಮಾವನನ್ನು ಅಗತ್ಯವಿರುವ ಕಡೆಗೆ ಕರೆದೊಯ್ಯುವುದು ಅವಳೇ. ಟಿಕೆಟ್ ಬುಕ್ ಮಾಡುವುದು, ಆನ್‌ಲೈನ್ ವ್ಯವಹಾರಗಳನ್ನು ಮಾಡುವುದು, ಬಿಲ್‌ಗಳನ್ನು ಕಟ್ಟುವುದು, ಮನೆಗೆ ಬೇಕಾದ ಸಾಮಾನುಗಳನ್ನು ತರಿಸುವುದು, ಸೌಕರ್ಯಗಳನ್ನು ಹೊಂದಿಸುವುದು ಕೂಡ ಅವಳೇ. ಅವಳ ಅಮ್ಮನನ್ನೂ ಬೇಕಾದ ಕಡೆ ಕರೆದೊಯ್ಯುವುದಕ್ಕೆ ಆಕೆಯೇ ಬೇಕು. ಆದರೂ ಈ ಲಘು ಹೇಳಿಕೆಗಳೇಕೆ ಹುಟ್ಟಿಕೊಳ್ಳುತ್ತವೆ ಎಂದು ಅವಳಿಗೆ ಅಚ್ಚರಿಯಾಗುತ್ತದೆ. ಎಷ್ಟೋ ಬಾರಿ, ಮನೆಗೆ ಬಂದ ಅತಿಥಿಗಳ ಮುಂದೆಯೇ ಅಂತಹ ಹೇಳಿಕೆಗಳನ್ನು ಪತಿ ಹೇಳುವುದನ್ನು ಕೇಳಿಸಿಕೊಂಡು ಸುಮ್ಮನೇ ನಕ್ಕುಬಿಡುತ್ತಿದ್ದಳು.

ಮನೆಯಲ್ಲಿ ಮಾತುಕತೆಗಳಾಗುವಾಗ ಬಳಸುವ ಪದಗಳು ಮಕ್ಕಳ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರುತ್ತವೆ. ಮಕ್ಕಳು ದೊಡ್ಡವರಾದ ಬಳಿಕ ಲಿಂಗಸೂಕ್ಷ್ಮತೆಯನ್ನು ಬೆಳೆಸಿಕೊಳ್ಳಬೇಕಾದರೆ, ಅವರೊಡನೆ ಮತ್ತು ಅವರ ಎದುರು ಇತರರೊಡನೆ ಆಡುವ ಮಾತುಗಳಲ್ಲಿ ಅನಗತ್ಯ ಅಥವಾ ಒರಟು ಮಾತುಗಳು ಸೇರದೇ ಇದ್ದರೆ ಉತ್ತಮ. ಯಾರದೇ ಕೆಲಸವನ್ನು ಗೌರವಿಸುವುದು ಒಂದು ಬಗೆಯ ಸೌಜನ್ಯವಾದರೆ, ಒಂದುವೇಳೆ ಕೆಲಸಗಳು ಗೊತ್ತಿಲ್ಲದೇ ಇದ್ದರೂ ಅದನ್ನು ತಿಳಿಹೇಳುವುದು ಇನ್ನೊಂದು ಬಗೆಯ ಸೌಜನ್ಯ. ಕೆಲಸಗಳು ಗೊತ್ತಿಲ್ಲದೇ ಇದ್ದರೂ ಅದೇನೂ ನಗೆಪಾಟಲಿನ ವಿಷಯವಲ್ಲ ತಾನೇ.

ಅಮ್ಮನ ಬಗೆಗಿನ ಲಘು ಮಾತುಗಳು, ಗಂಡುಮಕ್ಕಳ ಮನಸ್ಸಿನಲ್ಲಿ ‘ಮನೆಯಾಕೆಯೆಂದರೆ ಹೀಗೆ’ ಎಂಬ ಭಾವನೆಯನ್ನು ಬಿತ್ತುವುದು. ಅವರು ದೊಡ್ಡವರಾದ ಬಳಿಕ ಸಮಾಜವನ್ನು ನೋಡುವ ನೋಟದಲ್ಲಿಯೂ ಇದೇ ದೃಷ್ಟಿಕೋನ ಇರುವುದು. ಎಲ್ಲವನ್ನೂ ನಿಭಾಯಿಸುವ ಅಮ್ಮನ ಕುರಿತು ಲಘು ಮಾತುಗಳನ್ನು ಹೇಳಬಹುದಾದರೆ, ವೃತ್ತಿ ಪ್ರವೃತ್ತಿ ಕ್ಷೇತ್ರದಲ್ಲಿಯೂ ಎಲ್ಲವನ್ನೂ ನಿಭಾಯಿಸುವ ಯಾರಿಗೇ ಆಗಲೀ, ಅಂತಹ ಮಾತುಗಳನ್ನು ಹೇಳಬಹುದು ಎನ್ನುವ ಇಂಗಿತಾರ್ಥ ಇರುತ್ತದೆ. ಎರಡನೆಯದಾಗಿ, ಮಹಿಳೆಯರ ಕೆಲಸ ಕಾರ್ಯಗಳನ್ನು, ತ್ಯಾಗಗಳನ್ನು ಇದೇ ಮಾದರಿಯಲ್ಲಿ ಗ್ರಹಿಸುವುದು ವಾಡಿಕೆ ಎಂಬುದೊಂದು ಗ್ರಹಿಕೆಯೂ ಸೇರಿಬಿಡುತ್ತದೆ. ಈ ಗ್ರಹಿಕೆಗಳು ಬದಲಾಗುವುದು ಅಗತ್ಯ.

ಪ್ರತಿಕ್ರಿಯಿಸಿ: feedback@sudha.co.in